Sri G. VENKATAI GOWDA.—You have been pleased to furnish per capita tax liability during the past six years. May I know whether it is confined to direct taxes or it includes indirect taxes ?

Sri B. D. JATTI.—Both *i.e.* direct and indirect taxes are given.

Sri ANNA RAO GANAMUKHI.—May I know whether the tax includes Central taxes and local taxes ?

Sri B. D. JATTI.—We have given that information separately.

ಶ್ರೀ ಗೋಪಾಲ ಸಾಲೆನ್ನ.—ಈ ಟ್ಯಾಕ್ಸು ಬಾಕಿ ಎಂದರೆ ಅರಿಯರ್ಸು ಎಷ್ಟಿತ್ತು, ಸ್ವಾಮೀ ?

Sri B. D. JATTI.—That information is not available now.

ಶ್ರೀ ಎ. ಕೃಷ್ಣಶೆಟ್ಟಿ.—ಉತ್ತರದ ತಃಖ್ತೆ ಎಡರಲ್ಲಿ ಹೇಳಿರುವಂತೆ ಒಟ್ಟು ಪ್ರತ್ಯಕ್ಷತೆರಿಗೆಗಳು 1,039.64 ಲಕ್ಷದಿಂದ 1,380.47ರವರೆಗಿದೆ. ಇದು ಯಾವ ಪ್ರಮಾಣದಲ್ಲಿ ಆ ರೀತಿ ಇದೆ, ಸ್ವಾಮೀ ?

Sri B. D. JATTI.—That can be worked out.

Sri T. MADAIAH GOWDA.—In answer to (c) you have given the tax burden in the neighbouring States. May I know the per capita income in those States ?

Sri B. D. JATTI.—I have not got that information.

Sri ANNA RAO GANAMUKHI.—It appears there is steep rise in indirect taxes during these five years. May I know whether the poor people are hit as a result of the rise in indirect taxes ?

Sri B. D. JATTI.—The Hon'ble Member can make use of his knowledge find to out whether it is a burden to the poorest man or to the richest man. But I wish to tell him that this is not the correct method of stating per capita taxes I will give one instance. Tobacco tax is not paid by the Mysore State peoples only because the factory happens to be here ; the tax will be got from outside also ; but it is calculated for our purpose.

Sri ANNA RAO GANAMUKHI.—May I know whether the Government of Mysore computed the consumer expenditure of poor families and middle class families also ?

Sri B. D. JATTI.—While we are ntroducing taxation measures, that question also will be taken into consideration.

ಶ್ರೀ ಜಿ. ನಾರಾಯಣಗೌಡ.—ಇಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ನೋಡುವಾಗ ಆಬಕಾರಿ ತೆರಿಗೆಯಲ್ಲಿ 1961-62ನೆಯ ಸಾಲಿನಲ್ಲಿ ಬಹಳ ಕಡಮೆಯಾಗುವುದಕ್ಕೆ ಕಾರಣವೇನು?

Sri B. D. JATTI.—It is a well known fact that prohibition is being introduced in district after district. So the income is bound to be less and less. The figures are for 1960-61 : 319.15; for 1961-62, 274.55. There must be reduction because we have extended prohibition.

Grant of Licence for starting a Neera Centre in Tiptur Taluk

*Q—79. Sri K. P. REVANNA SIDDAPPA (Tiptur).—

Will the Government be pleased to state :—

(*a*) when the management of Ediga Sangha has represented to Government for grant of licence to start a Neera centre in Tiptur Taluk ;

(*b*) why the licence has not been granted so far ;

(*c*) the number of applications received in this behalf from other areas;

(*d*) the number of them that have been sanctioned and the particulars thereof ?

A.—Sri M. V. RAMA RAO (Minister for law).—

(*a*) No such representation by the Ediga Sangha has been received for the grant of licence to start Neera Centres at Tiptur Taluk.

(*b*) Does not arise.

(*c*) No applications were received from other areas.

(*d*) Does not arise.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮೈಸೂರು ಸಂಸ್ಥಾನದಲ್ಲಿ ಈಗ ನೀರಾ ಕೇಂದ್ರಗಳು ನಡೆಯುತ್ತಿವೆಯೇ?

Sri M. V. RAMA RAO.—This is a question that relates to Tiptur Taluk.

ತಿಪಟೂರು ತಾಲ್ಲೂಕಿನಿಂದ ನೀರಾಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಅರ್ಜಿಗಳು ಬಂದಿವೆಯೆ ಎಂದು ಕೇಳಿದ್ದಾರೆ. ಅದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದೆ. ಹಾಗೆಯೇ ಇತರ ಕಡೆಗಳಿಂದಲೂ ಬಂದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—''ಇತರಕಡೆ'' ಎಂದರೆ ಅರ್ಥವೇನು ?

ಶ್ರೀ ಎಂ. ವಿ. ರಾಮರಾವ್.—ಅದು ಮಾನ್ಯ ಸದಸ್ಯರು ಮಾಡಿರುವ ಪದಪ್ರಯೋಗ. ಅದರಅರ್ಥ ಅವರಿಗೆ ಗೊತ್ತು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಿಪಟೂರು ಮತ್ತು ಬೇರೆಕಡೆಗಳಿಂದ ಎಂದು ನಾನು ಕೇಳಿರುವುದು.

ಶ್ರೀ ಎಂ. ವಿ. ರಾಮರಾವ್.—ಅದಕ್ಕೆ ತಾವು ಸಪರೇಟ್ ಆಗಿ ಪ್ರಶ್ನೆ ಕೇಳಬಹುದು.

Sri K. P. REVENNA SIDDAPPA.—We have permission to put only ten questions. ಹೀಗಿರುವಾಗ ಬೇರೆ ಪ್ರಶ್ನೆಎಂದರೆ ಹೇಗೆ ?

Sri G. VENKATAI GOWDA.—Is it not a fact that the Government of Mysore took a decision about two or three years back not permitting the starting of Neera centres ?

Sri M. V. RAMA RAO.—No such decision has been taken not to star. Neera centres, two or three years back-As a matter of fact, last year Governn ment took a decision to close dowd Neera centres wherever they were fount to be laying themselves open to objection on the ground that the Neera have been commensed with toddy entres.

Sri G. VENKATAI GOWDA,—May I know whether Government has given permission to start Neera centres for the last three yeers ?

Sri M. V. RAMA RAO.—Every year Neera centres have been started and every year Neera centres have been closed down.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀರಾ ಸೆಂಟರು ಗಳನ್ನು ನಾಲ್ಕು ವರ್ಷಗಳಿಂದ ತಿಪಟೂರು ಮತ್ತಿತರ ಕಡೆಗಳಲ್ಲಿ ತೆಗೆಯಬೇಕು ಎಂದು ಗವರ್ನಮೆಂಟು ಆರ್ಡರುಮಾಡಿ ಹೊಸದಾಗಿ ಅನೇಕ ಸೆಂಟರುಗಳನ್ನು ತೆಗೆಯಲು ಅನುಮತಿ ಕೊಟ್ಟಿಲ್ಲವೇ ?

Sri M. V. RAMA RAO.—The Hon'ble Member has put a specific question and a specific answer has been given. ಈಡಿಗಸಂಘದವರು ತೆರೆಯಬೇಕೆಂದು ಕೇಳಿದರು. ಅದನ್ನು ಕೊಟ್ಟಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧ್ಯಕ್ಷರೇ, ಸರ್ಕಾರ ದವರು ಅನೇಕ ಕಡೆ ಈ ನೀರಾ ಕೇಂದ್ರವನ್ನು ನಡೆಸಲು ಸೊಸೈಟಿಗಳವರಿಗೆ ಲೈಸೆನ್ಸು ಕೊಟ್ಟಿರತಕ್ಕ ರುಜುವಾತನ್ನು ತಮ್ಮ ಗಮನಕ್ಕೆ ತಂದರೆ ಆಗ ತಾವೇನು ಕ್ರಮಕೈಗೊಳ್ಳುತ್ತೀರಿ. ?

Sri M. V. RAMA RAO.—The information of the Government is that there is no such Sangha in existence. It is an imaginary Sangha.

Sri S. SIVAPPA.—Sir, the very purpose of putting the question in Kannada is to understand the answer well. If the Hon'ble Minister answers in English what is the use of putting the question in Kannada ?

Mr. SPEAKER.—I very much appreciate the Hon'ble member's point. As far as possible the Minister may answer in the same language, if he so pleases.

Sri GANJI VEERAPPA.—May I know whether Government have taken any policy decision with regard to the opening of Neera centres ?

Sri M. V. RAMA RAO.—Government have been taking decisions in regard to opening or closing of Neera Centres time and again. The entire policy is under review and I hope to be able to make an announcement within the course of the next two or three weeks.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸರ್ಕಾರದವರು ಅನೇಕ ಕಡೆಗಳಲ್ಲಿ ತಮಗೆ ಬೇಕಾದವರಿಗೆ ಲೈಸೆನ್ಸನ್ನು ಕೊಟ್ಟು ಬೇಡವಾದವರಿಗೆ ಈ ನೀರಾ ಕೇಂದ್ರ ತೆರೆಯಲು ಲೈಸೆನ್ಸನ್ನು ಕೊಡದಿರುವ ಕಾರಣ ಜನರಲ್ಲಿ ತುಂಬಾ ಅತೃಪ್ತಿ ಉಂಟಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರು ಮಾಡುತ್ತಿರುವ ಆಪಾದನೆಗಳನ್ನು ಸರ್ಕಾರದವರು ಸ್ವಲ್ಪವೂ ಒಪ್ಪುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಈ ನೀರಾ ಕೇಂದ್ರ ಗಳನ್ನು ನಡೆಸತಕ್ಕ ಕೆಲಸವನ್ನು ಸರ್ಕಾರದವರು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಗಳಿಗೆ ಒಪ್ಪಿಸಬೇಕೆಂಬ ಅಭಿಪ್ರಾಯವನ್ನು ಇಟ್ಟಿಕೊಂಡಿದ್ದಾರೆಯೇ ?

ಶ್ರೀ ಎಂ. ವಿ. ರಾಮರಾವ್.—ನೀರಾ ಕೇಂದ್ರ ಗಳನ್ನು ಸ್ಟಾರ್ಟ್ ಮಾಡುವ ಮತ್ತು ಅದನ್ನು ಆಥರೈಸ್ ಮಾಡುವುದನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಗಳಿಗೆ ಒಪ್ಪಿಸಿ ಬೇಕೆಂಬ ಉದ್ದೇಶ ಸರ್ಕಾರಕ್ಕಿಲ್ಲ.

ಶ್ರೀ ಸಂಜೀವನಾಥ ಐಕಳ.—ಸರ್ಕಾರದವರು ಒಂದಾವರ್ತಿ ಈ ನೀರಾ ಕೇಂದ್ರ ತೆರೆಯಲು ಅನುಮತಿ ಕೊಟ್ಟ ಆನಂತರ ಅಲ್ಲಿ ಅವ್ಯವಸ್ಥೆಗಳಾಗಿ ಅದನ್ನು ಮುಚ್ಚಿಸಿ ಬಿಟ್ಟನಂತರ ಮತ್ತೆ ಅವರಿಗೇ ಆ ನೀರಾ ಕೇಂದ್ರ ತೆರೆಯಲು ಅವಕಾಶ ಕೊಟ್ಟಿರತಕ್ಕ ಸಂದರ್ಭ ಗಳಿವೆಯೇ ?

ಶ್ರೀ ಎಂ. ವಿ. ರಾಮರಾವ್.—ಅಂಥ ಸಂದರ್ಭ ಗಳಾವೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅವ್ಯವಸ್ಥೆನಡೆದು ಮುಚ್ಚಿಸಲಾಗಿದ್ದ ೧೦ ಫಿರ್ಕಾಗಳಲ್ಲಿ ಮೊನ್ನೆ ತಾನೆ ನಡೆದ ಜನರಲ್ ಎಲೆಕ್ಷನ್ ಕಾಲದಲ್ಲಿ ಎಲೆಕ್ಷನ್ ಪ್ರಾರಂಭ ವಾಗುವುದಕ್ಕೆ ೮-೧೦ ದಿನಗಳಿದ್ದ ಹಾಗೆ ಅವುಗಳನ್ನು ಪುನಃ ತೆರೆಯಲು ಲೈಸೆನ್ಸ್ ಕೊಟ್ಟಿಲ್ಲವೇ ?

ಶ್ರೀ ಎಂ. ವಿ. ರಾಮರಾವ್.—ಅಂಥ ನಿದರ್ಶನ ಗಳು ಅವರಿಗೆ ಗೊತ್ತಿದ್ದರೆ ತಿಳಿಸಲಿ. ಆನಂತರ ಅವು ಗಳನ್ನು ವಿಚಾರಿಸಲಾದೀತು.

ಶ್ರೀ ಎಚ್. ಆರ್. ಕೇಶವಮೂರ್ತಿ.—" ನೀರಾ " ಎಂದರೆ ತೆಲುಗಿನಲ್ಲಿ " you come " ಎಂದರೆ ಹೆಂಡ ಕುಡಿಯಲು ಅಪ್ರತ್ಯಕ್ಷವಾಗಿ ಇಂಡಿವಿಜಿಯಲ್ ಗಳನ್ನು ಇನ್ವೈಟ್ ಮಾಡುವುದು ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ರಾಮರಾವ್.—ಇಲ್ಲ.

ಶ್ರೀ ಬಿ. ಭಾಸ್ಕರಪೆಟ್ಟಿ.—ನೀರಾ ಕೇಂದ್ರಗಳಲ್ಲಿ ಯಾವುದಾದರೂ ತೊಂದರೆ ಉದ್ಭವಿಸಿದರೆ ಅದನ್ನು ಮುಚ್ಚಲಿಕ್ಕೆ. .....

ಶ್ರೀ ಎಂ ವಿ. ರಾಮರಾವ್.— ಯಾವುದಾದರೂ ತೊಂದರೆ ಎಂದು ನಾನು ಹೇಳಲಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಿಪಟೂರು ತಾಲ್ಲೂಕಿಗೆ ಸಂಬಂಧ ಪಟ್ಟ ಪಶ್ನೆಯಲ್ಲಿ ಉದ್ಭವಿಸ ತಕ್ಕ ಉಪಪ್ರಶ್ನೆಗಳನ್ನು ಮಾತ್ರ ಕೇಳಬೇಕು. Your question must relate to Tiptur. If interpellations of general type are put, they cannot be supplementaries.

ಶ್ರೀ ಬಿ. ಭಾಸ್ಕರಪೆಟ್ಟಿ.—ಪಡುಬಿದರೆಯಲ್ಲಿ ನೀರಾ ಕೇಂದ್ರದಲ್ಲಿ ನಡೆಯುತ್ತಿದ್ದ ಅಕ್ರಮಗಳನ್ನು ಅಲ್ಲಿಯ ಕರೆಕ್ಟರು ಪತ್ತೆ ಹಚ್ಚಿದ್ದೇ ಅಲ್ಲದೆ ಬೆಂಗಳೂರಿನಲ್ಲಿರತಕ್ಕ ಸಿ.ಐ.ಡಿ.ಗಳೂ ಸಹ ಅಲ್ಲಿಯ ಅನೇಕ ಅಕ್ರಮಗಳನ್ನು ಪತ್ತೆ ಹಚ್ಚಿದ್ದಾರೆ. ಎರೆಕ್ಷನ್‌ಗೆ ಮುಂಚಿತವಾಗಿ ಅಲ್ಲಿ ಮತ್ತೆ ನೀರಾ ಕೇಂದ್ರ ತೆರೆದಿದ್ದು ತಮಗೆ ಗೊತ್ತಿಲ್ಲವೇ?

ಶ್ರೀ ಎಂ. ವಿ. ರಾಮರಾವ್. —ಗೊತ್ತಿಲ್ಲ.

ಶ್ರೀ ಜಿ. ವೆಂಕಟೇಗೌಡ.—ಈ ನೀರಾ ಕೇಂದ್ರ ಗಳನ್ನು ತೆರೆಯುವುದರಿಂದ ಸರ್ಕಾರದವರು ಕೈಗೊಂಡಿರತಕ್ಕ ಪಾನನಿರೋಧ ನೀತಿಗೆ ಧಕ್ಕೆ ಬರುತ್ತದೆಂಬ ಅಂಶವನ್ನು ಅನೇಕ ವೇಳೆ ಪ್ರತಿನಿಧಿಗಳು ಸರ್ಕಾರದವರ ಗಮನಕ್ಕೆ ತಂದಿಲ್ಲವೇ ?

ಶ್ರೀ ಎಂ. ವಿ. ರಾಮರಾವ್.—ಕೆಲವು ಸಂದರ್ಭ ಗಳಲ್ಲಿ ಅಂಥಾದ್ದನ್ನು ಸರ್ಕಾರದವರ ಗಮನಕ್ಕೆ ತಂದಿರಬಹುದು. ಅಂಥ ಸಂದರ್ಭದಲ್ಲಿ ಸರ್ಕಾರ ದವರೂ ಸಹ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹೊಸದಾಗಿ ನೀರಾ ಕೇಂದ್ರಗಳನ್ನು ತೆರೆಯಲು ಅವಕಾಶ ವಿದೆಯೇ?

ಶ್ರೀ ಎಂ. ವಿ. ರಾಮರಾವ್.—ಅಂಥಾ ವಿಚಾರ ಗಳು ಬಂದರೆ ಅವುಗಳನ್ನು ಅವುಗಳ ಮೆರಿಟ್ಸ್ ಮೇಲೆ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ. —ಸರ್ಕಾರದವರು ಈ "ಮೆರಿಟ್" ಎಂಬುದನ್ನು ಯಾವ ಆದಾರದ ಮೇಲೆ ನಿರ್ಧಾರಮಾಡುತ್ತಾರೆ ?

ಶ್ರೀ ಎಂ. ವಿ. ರಾಮರಾವ್.—ಆ ವಿಚಾರ ಮಾನ್ಯ ಸದಸ್ಯರಿಗೇ ಗೊತ್ತಿದೆ.

Sri D. M. SIDDIAH.—Is Neera sold in the so called Neera centres ?

Mr. SPEAKER—.If you feel like answering it please answer. Otherwise it need not be answered.

Sri D. M. SIDDIAH.—In the light of the fact that Neera is not sold in the Neera centres, will the Government think of closing these centres ?

Sri M. V. RAMA RAO.—Neera is sold in the Neera centres. Whenever something else is sold, Government have no hesitation to close those centres.

ಶ್ರೀ ವೈ. ಮಂಜಯ್ಯಶೆಟ್ಟಿ.—ಮಹಾತ್ಮ ಗಾಂಧಿ ಯವರು "ನೀರಾ" ಒಳ್ಳೆಯ ಆಹಾರವನ್ನುವೆಂದು ಹೇಳಿರತಕ್ಕ ಅಂಶ ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ?

ಶ್ರೀ ಎಂ. ವಿ. ರಾಮರಾವ್.—ಆ ರೀತಿ ಅವರು ಹೇಳಿರತಕ್ಕದ್ದನ್ನು ನಾನೆಲ್ಲಿಯೂ ನೋಡಿಲ್ಲ.

Providing of Drinking Water Wells in Bangalore South Taluk.

*Q.—83. Sri D. MUNICHINNAPPA (Bangalore South).—

Will the Government be pleased to state :—

(*a*) whether they are aware that people are put to hardships for lack of drinking water facilities in the villages of Bangalore South Taluk ;

(*b*) whatever they intend to take necessary steps to provide drinking water wells in the villages of the saidTaluk ?

A.— Sri RAMAKRISHNA HEGDE (Minister for Development and Co-operation).—

(*a*) No.

(*b*) Government is taking action to expand the facilities already available.

ಶ್ರೀ ಡಿ. ಮುನಿಚಿನ್ನಪ್ಪ.—ಕುಡಿಯುವ ನೀರಿನ ಬಾವಿಗಳಿಲ್ಲದ ಗ್ರಾಮಗಳಿಗೆ ನೀರನ್ನು ಒದಗಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಉತ್ತರ ಅಚ್ಚಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ೨೪೨ ಹಳ್ಳಿಗಳಿವೆ. ಆ ಪೈಕಿ ೧೩೬ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿ ಗಳ ಸೌಕರ್ಯವಿದೆ. ನೀರಿಗೆ ತೊಂದರೆ ಇರತಕ್ಕ ಗ್ರಾಮಗಳಿಗೆ ನೀರನ್ನು ಒದಗಿಸಲು ೫೩ ಬಾವಿಗಳ ಕೆಲಸವನ್ನು ಕೈಗೊಂಡಿದೆ. ಈ ಪೈಕಿ ಈಗಾಗಲೆ ೪೩ ಬಾವಿಗಳ ಕೆಲಸ ಪೂರೈಸಿದೆ.

ಶ್ರೀ ಬಿ. ನಂಜಪ್ಪ.—ಉಳಿದ ಬಾವಿಗಳ ಕೆಲಸವನ್ನು ತಾವು ಯಾವಾಗ ಪೂರೈಸುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—೫೩ ಬಾವಿಗಳಲ್ಲಿ ಈಗಾಗಲೇ ೪೩ ಬಾವಿಗಳು ಆಗಿವೆ. ಇನ್ನುಳಿದಿರು ವವು ಹತ್ತು ಬಾವಿಗಳು. ಇವುಗಳನ್ನೂ ಸಹ ಜಾಗ್ರತೆ ಮುಗಿಸಲಾಗುತ್ತದೆ.

ಶ್ರೀ ಜಿ. ವೆಂಕಟೇಗೌಡ.—"ಈಗಾಗಲೇ ದೊರೆಯುತ್ತಿರುವ ಸೌಲಭ್ಯಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ" ಎಂದು ಉತ್ತರದಲ್ಲಿ ತಿಳಿಸಿದೆ. ತಾವು ಈಗ ಈ ಬಾವಿಯ ವಿಚಾರವನ್ನು ಹೇಳುತ್ತಿದ್ದೀರಿ. (ಎ)ಗೆ ಉತ್ತರವಾಗಿ ತೊಂದರೆ ಇರುವುದು ಗೊತ್ತಿಲ್ಲವೆಂದು ಏಕೆ ಹೇಳಿದ್ದೀರಿ ?

Sri RAMAKRISHNA HEGDE.—There is hardship but there are certain facilities which the people are making use of.

ಶ್ರೀ ಡಿ. ಮುನಿಚಿನ್ನಪ್ಪ.—ಬಾವಿಗಳಿಲ್ಲದ ಗ್ರಾಮ ಗಳಿಗೆ ಎಷ್ಟು ದಿವಸಗಳಲ್ಲಿ ಈ ಅನುಕೂಲ ಒದಗಿಸು ತ್ತೀರಿ ?